ಸರ್ಕಾರದ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ
SECRETARY TO GOVT. (BUDGET & RESOURCES), FINANCE DEPARTMENT

ಅ.ಸ.ಪತ್ರ ಸಂಖ್ಯೆ: ಆಇ 48 ಜಿಐಇ 2020 ದಿನಾಂಕ: 08.10.2020

ಮಾನ್ಯರೇ,

ವಿಷಯ: ಬಾಕಿ ವೇತನ ಮತ್ತು ವೇತನ ಭತ್ಯೆಗಳನ್ನು ಪಾವತಿಸಲು ಕಡತಗಳನ್ನು ಆರ್ಥಿಕ ಇಲಾಖೆಗೆ ಸಲ್ಲಿಸುವ ಬಗ್ಗೆ.

******

ಇದೇ ಸಮಸಂಖ್ಯೆ ಪತ್ರ ದಿನಾಂಕ: 26.06.2020 ರಲ್ಲಿ ಎಲ್ಲಾ ಆಡಳಿತ ಇಲಾಖೆಗಳು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಇಲಾಖೆಗಳಿಂದ ವೇತನ ಮತ್ತು ಭತ್ಯೆಗಳ ವಿವರಗಳನ್ನು ಶೀರ್ಷಿಕೆವಾರು ವಿವರಗಳನ್ನು ಕ್ರೋಡೀಕರಿಸಿ ಲೆಕ್ಕಚಾರದ (Soft copy/ Hard copy) ವಿವರಗಳೊಂದಿಗೆ ದೃಡೀಕರಿಸಿ ಏಕೈಕ ಕ್ರೋಡೀಕೃತ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಆರ್ಥಿಕ ಇಲಾಖೆಯಲ್ಲಿ ಸಾಮಾನ್ಯವಾಗಿ ಆಯವ್ಯಯ ತಯಾರಿಕೆ ಕಾರ್ಯಗಳು ನವೆಂಬರ್ ಮಾಹೆಯಲ್ಲಿ ಪ್ರಾರಂಭವಾಗುವುದರಿಂದ ಆರ್ಥಿಕ ಇಲಾಖೆಯ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಆಯವ್ಯಯ ತಯಾರಿಕೆ ಕಾರ್ಯಗಳಲ್ಲಿ ತೊಡಗುವುದರಿಂದ ಆಡಳಿತ ಇಲಾಖೆಗಳು ಸಲ್ಲಿಸುವ ಹಿಂದಿನ ಸಾಲಿನ ವೇತನ ಬಾಕಿ ಪ್ರಕರಣಗಳ ಕಡತಗಳನ್ನು ಇತ್ಯರ್ಥಗೊಳಿಸಲು ಸಮಯದ ಅಭಾವ ಉಂಟಾಗುವ ಪ್ರಸಂಗ ಬರುತ್ತದೆ.

ಆದುದರಿಂದ, ಇದುವರೆಗೂ ವೇತನ ಮತ್ತು ಭತ್ಯೆಗಳ ಬಾಕಿ ಪ್ರಕರಣಗಳನ್ನು ಸಲ್ಲಿಸದೆ ಇರುವ ಆಡಳಿತ ಇಲಾಖೆಗಳು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಇಲಾಖೆಗಳಿಂದ ವೇತನ ಮತ್ತು ಭತ್ಯೆಗಳ ಬಾಕಿ ಪ್ರಕರಣಗಳ ಏಕೈಕ ಕ್ರೋಡೀಕೃತ ಕಡತಗಳನ್ನು ಆರ್ಥಿಕ ಇಲಾಖೆಗೆ 30 ಅಕ್ಟೋಬರ್ 2020 ರೊಳಗೆ ಸಲ್ಲಿಸುವಂತೆ ಆಡಳಿತ ಇಲಾಖೆಗಳಿಗೆ ತಿಳಿಸಿದೆ.

ಅನಂತರ ಸಲ್ಲಿಸುವ ಯಾವುದೇ ಪ್ರಸ್ತಾವನೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

Ekroop Caur 9/10
(ಡಾ|| ಏಕ್ ರೂಪ್ ಕೌರ್)

ಇವರಿಗೆ:

ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ ಕಾರ್ಯದರ್ಶಿ/ ಇಲಾಖಾ ಮುಖ್ಯಸ್ಥರು

2ನೇ ಮಹಡಿ, ವಿಧಾನ ಸೌಧ, ಬೆಂಗಳೂರು – 560 001 2nd Floor, Vidhana Soudha, Bengaluru - 560 001
Phone: 080-22353138 / 22033438 Fax: 080-22280520 e-mail: secybud-fd@karnataka.gov.in